# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :759

ಸದಸ್ಯರ ಹೆಸರು :ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)

ಉತ್ತರಿಸುವ ದಿನಾಂಕ :22.02.2023

ಉತ್ತರಿಸುವ ಸಚಿವರು :ಕಂದಾಯ ಸಚಿವರು.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೋಲಾರ ಜಿಲ್ಲೆ, ಕೋಲಾರ ಕಸಬಾ ಹೋಬಳಿ, ವೇಟೆ ಚಾಮನಹಳ್ಳಿ, ಗ್ರಾಮ ಸರ್ವೇ ನಂಬರ್ 28/1 ರಲ್ಲಿ 15 ಗುಂಟೆ ಜಮೀನು ಭೂ ಪರಿವರ್ತನೆಗೊಂಡು ಒಬ್ಬರ ಹೆಸರಿಗೆ, ದಿನಾಂಕ: 26.02.1988 ರಲ್ಲಿ (ಕ್ರಯ ಪತ್ರದ ಸಂಖ್ಯೆ: 2626/87-88) ಮಾರಾಟವಾಗಿ, ಖಾತೆ ಕಂದಾಯಗಳನ್ನು ಕಾಲಕಾಲಕ, ಪಾವತಿಸಿಕೊಂಡು ಬರುತ್ತಿದ್ದರೂ ಸಹ ಸದರಿ ಜಮೀನನ್ನು ದಿನಾಂಕ: 28.10.2019 ರಲ್ಲಿ ಅಕ್ರಮವಾಗಿ ಬೇರೊಬ್ಬರ ಹೆಸರಿಗೆ (ಕ್ರಯ ಪತ್ರದ ಸಂಖ್ಯೆ :KLR-1-05020-2019-20) ಹಾಗೂ ಇ ಸ್ವತ್ತಿನ ಸಂಖ್ಯೆ: 151500701201021044) ನಕಲಿ ದಾಖಲೆ ಸೃಷ್ಟಿಸಿ, ಕ್ರಯ ಪತ್ರದ ಕರಾರನ್ನು ನೋಂದಣಿ ಮಾಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಹಾಗಿದ್ದಲ್ಲಿ ಅಕ್ರಮದಲ್ಲಿ ಭಾಗಿಯಾದವರ ಪೂರ್ಣ ವಿವರಗಳನ್ನು ಒದಗಿಸುವುದು) | ದಿನಾಂಕ:24/10/2019ರಲ್ಲಿ ಉಪನೊಂದಣಾಧಿಕಾರಿಗಳ ಕಛೇರಿಯ ನೊಂದಣಿ ಸಂಖ್ಯೆ: KLR-1-05020-2019-20 ರಲ್ಲಿ ಶ್ರೀ.ಅರ್ಜುನಪ್ಪ, ವಿಜಯಲಕ್ಷ್ಮೀ, ವಿನಯ್, ಸಂದೀಪ್ ಕುಮಾರ್, ಸರಸಮ್ಮ ಮತ್ತು ಬ್ಯಾಗಮ್ಮ ವಿ ರವರುಗಳು ಶ್ರೀ.ಜನಾರ್ಧನ್ ಎಂ ಮತ್ತು ನಾರಾಯಣಗೌಡ.ಎ ರವರುಗಳಿಗೆ ಸ್ವಾಧೀನ ರಹಿತ ಕ್ರಯದ ಕರಾರು ಪತ್ರವನ್ನು ನೊಂದಣಿ ಮಾಡಿಕೊಟ್ಟಿದ್ದು, ಸದರಿ ಪತ್ರವು ನೊಂದಣಿಯಾದ ಸಮಯದಲ್ಲಿ ಹಾಜರುಪಡಿಸಿರುವ ಆಧಾರ್ ಕಾರ್ಡ್‌ಗಳು ಮತ್ತು ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದ ಇ-ಖಾತೆ ಸಂಖ್ಯೆ: 151900701201021044 ನ್ನು ಹಾಜರುಪಡಿಸಿಕೊಂಡು ಸದರಿ ಮಾರಾಟಗಾರರ ಹೆಸರಿನಲ್ಲಿ ಲಭ್ಯವಿರುವುದನ್ನು ಪರಿಶೀಲಿಸಿ ನೊಂದಣಿಯನ್ನು ಮಾಡಲಾಗಿರುತ್ತದೆ.<br>ಆದುದರಿಂದ, ಸದರಿ ಉಲ್ಲೇಖಿತ ದಸ್ತಾವೇಜು ಸ್ವಾಧೀನ ರಹಿತ ಕ್ರಯದ ಕರಾರು |

| | | |
|---|---|---|
| | | ಪತ್ರವಾಗಿದ್ದು, ಇದು ಕ್ರಯ ಪತ್ರವಾಗಿರುವುದಿಲ್ಲ ಹಾಗೂ ಸದರಿ ದಸ್ತಾವೇಜಿನ ಮುಖಾಂತರ ಯಾವುದೇ ಸ್ವತ್ತುಗಳು ಪರಭಾರೆಗೊಂಡಿರುವುದಿಲ್ಲ. ಸದರಿ ದಸ್ತಾವೇಜಿನ ನೊಂದಣಿ ಪ್ರಕ್ರಿಯೆಯಲ್ಲಿ ಯಾವುದೇ ಲೋಪದೋಷಗಳು ಆಗಿರುವುದು ಕಂಡುಬಂದಿರುವುದಿಲ್ಲ. |
| ಆ) | ಇದುವರೆವಿಗೂ ಸದರಿ ಅಕ್ರಮದಾರರ ವಿರುದ್ಧ ತೆಗೆದುಕೊಳ್ಳಲಾದ ಕ್ರಮಗಳೇನು; | ಪ್ರಶ್ನೆ ಉದ್ಭವಿಸುವುದಿಲ್ಲ. |
| ಇ) | ಯಾವ ಕಾಲಮಿತಿಯಲ್ಲಿ ಅಕ್ರಮ ಕಬಳಿಕೆಯನ್ನು ತೆರವುಗೊಳಿಸಿ, ವಂಚನೆಗೊಳಗಾದವರಿಗೆ ನ್ಯಾಯ ಒದಗಿಸಲಾಗುವುದೇ? | ಪ್ರಶ್ನೆ ಉದ್ಭವಿಸುವುದಿಲ್ಲ. |

ಸಂಖ್ಯೆ: ಆರ್‌ಡಿ 92 ಎಲ್‌ಜಿಕ್ಯೂ 2026

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು